# ಆಹಾ ಸುದ್ದಿ!

★ ಸಸಿತೋಟ




ಇಂಗ್ಲೆಂಡ್‌ನ ಸರ್‍ರೆಯಲ್ಲಿ ಹಸುವೊಂದು ಕಾರಿನ ಬಾನೆಟ್ ಮೇಲೆ ವಿರಮಿಸಿದ್ದು, ಇದು ಚಳಿ ತಡೆಯುವ ವಿಧಾನವಂತೆ. ಎಂಜಿನ್ ಬಿಸಿಯಾದ ಕೂಡಲೇ ಕಾರು ಏರುವ ಹಸುಗಳು ಮೈ ಬಿಸಿ ಮಾಡಿಕೊಳ್ಳುತ್ತವೆ. ಆದರೆ ಕಾರು ಮಾಲೀಕನಿಗೆ ಮಾತ್ರ ರಿಪೇರಿ ಖರ್ಚು ನೆನೆದರೆ ನಡುಕ ಬರುವುದು ಗ್ಯಾರಂಟಿ.



ಬ್ರಿಟನ್ನಿನ ಖ್ಯಾತ ಪಿಟೀಲು ವಾದಕಿ ಲಿಂಜಿ ಸ್ಟೋಪಾರ್ಡ್ ಇತ್ತೀಚೆಗೆ 'ಶಾಲೊ ಸೀಸ್' ಎಂಬ ಆಲ್ಬಂ ಬಿಡುಗಡೆ ಮಾಡಿದ್ದಾಳೆ. ಅದರ ಪ್ರಚಾರಕ್ಕೆ ನೀರಿನಾಳಕ್ಕೇ ಇಳಿದು ಪಿಟೀಲು ಕಛೇರಿ ನೀಡಿದಳಂತೆ. ಆಕೆಯ ಪಿಟೀಲು 20 ಲಕ್ಷ ಪೌಂಡ್ (ಅಂದಾಜು 20.12 ಕೋಟಿ ರೂಪಾಯಿ) ಬೆಲೆ ಬಾಳುವಂಥದ್ದು. ಸುತ್ತಮುತ್ತ ಇದ್ದ ಭದ್ರತಾ ಸಿಬ್ಬಂದಿಗೆ ಲಿಂಜಿಯ ಮೇಲೆ ಕಣ್ಣಿಡಬೇಕೋ ಅಥವಾ ಪಿಟೀಲಿನ ಮೇಲೋ ಎಂದು ಗೊಂದಲವಾಗಿರಬಹುದು.

ಸ್ಪೇನಿನಲ್ಲಿ ಅಂಚೆ ಅಣ್ಣಂದಿರ ಕುಚೇಷ್ಟೆಗಳು ಜಾಸ್ತಿಯಾಗಿವೆಯಂತೆ. ಪತ್ರಗಳನ್ನು ಬಟವಾಡೆ ಮಾಡದೆ 10 ವರ್ಷಗಳಲ್ಲಿ 3500 ಪತ್ರಗಳನ್ನು ಹಾಗೇ ಮನೆಯ ಮಾಡಿನಲ್ಲಿ ಸಿಗಿಸಿದ್ದ ಅಂಚೆಯಣ್ಣನನ್ನು ಈಚೆಗೆ ಕೆಲಸದಿಂದ ಕಿತ್ತು ಹಾಕಿದ್ದಾರಂತೆ. ಕಳೆದ ವರ್ಷವೂ ಇಂತಹದ್ದೇ ಪ್ರಕರಣ ನಡೆದಿದೆಯಂತೆ. ಅಂತರ್ಜಾಲ, ಸ್ಮಾರ್ಟ್‌ಫೋನ್ ಯುಗದಲ್ಲಿ ಅಂಚೆಯಲ್ಲಿ ಪ್ರೇಮಪತ್ರಗಳೂ ಹಾರಾಡಲ್ಲ. ಹೀಗಾಗಿ ಅಧಿಕಾರಿಗಳು ಕಾರಣ ತಡಕಾಡುತ್ತ ಮೇಲಧಿಕಾರಿಗಳಿಗೆ ಪತ್ರ ಬರೆಯುತ್ತ ಕೂತಿರಬಹುದು.

ಅಮೆರಿಕದ ಯುವಕನೊಬ್ಬ ನಿತ್ಯ ಒಂದು ಸಿನಿಮಾ ನೋಡುತ್ತಾನಂತೆ. ಅಷ್ಟೇ ಅಲ್ಲ, ಅದರ ಚಿತ್ರ ಬಿಡಿಸಿ ಇನ್‌ಸ್ಟಾಗ್ರಾಮಿಗೆ ಹಾಕುತ್ತಾನಂತೆ. ಗಂಟೆಗೆ 12 ಸಾವಿರ ಹಿಟ್‌ಗಳು ಆತನ ಚಿತ್ರಕ್ಕೆ ಬರುತ್ತಿವೆಯಂತೆ. ಆತ ಬಿಡಿಸಿದ ಚಿತ್ರಗಳನ್ನು ಹಾಕುತ್ತಿರುವ ಸ್ನೇಹಿತ ಲ್ಯೂಕ್ ಸ್ಟಾರ್ಕಿ ಕಲಾವಿದ ಬಳಸುವ ಸಾಫ್ಟ್‌ವೇರ್ ಬಗ್ಗೆ ಮಾತ್ರ ಹೇಳುತ್ತಿದ್ದು ಹೆಸರನ್ನು ಬಿಟ್ಟುಕೊಟ್ಟಿಲ್ಲವಂತೆ. ಕೆಲವು ನಿರ್ದೇಶಕರು, ನಿರ್ಮಾಪಕರು ಹೆಮ್ಮೆ ಪಟ್ಟುಕೊಳ್ಳುತ್ತಿರಬಹುದು, ತಮ್ಮ ಸಿನಿಮಾಗೆ ಒಬ್ಬರಾದರೂ ಪ್ರೇಕ್ಷಕ ಇದ್ದಾನಲ್ಲ ಎಂದು.



ಕ್ಯಾಲಿಫೋರ್ನಿಯಾದಲ್ಲಿ ನಡೆದ ಡೂ ಡಾ ಉತ್ಸವದಲ್ಲಿ ಕ್ಯಾಡಿಲಾಕ್ ಕಾರನ್ನೇ ಈಜುಗೊಳದ ರೀತಿ ಬದಲಾಯಿಸಿ ಮೋಜು ಅನುಭವಿಸಿದರು. ಈ ಉತ್ಸವ ವಿಚಿತ್ರವಾದ, ಮನೆಯಲ್ಲೇ ತಯಾರಿಸಲಾದ ವಿನ್ಯಾಸಗಳ ಪ್ರದರ್ಶನಕ್ಕೆ ಮೀಸಲಂತೆ.



ಐಸ್ ಬಕೆಟ್ ಚಾಲೆಂಜ್ ಬಗ್ಗೆ ನೆನಪಿರಬೇಕಲ್ಲ. ಅದನ್ನು ಸಮಾಧಿಯಡಿ ಸೇರಿಸಿದ ಜನ ಈಗ ಕಾಂಡೋಮ್ ಚಾಲೆಂಜ್ ಶುರು ಮಾಡಿಕೊಂಡಿದ್ದಾರಂತೆ. ಕಾಂಡೋಮ್‌ನಲ್ಲಿ ನೀರು ತುಂಬಿ ಪ್ರೀತಿಪಾತ್ರರ ಮೇಲೆ ಸುರಿಯುವುದು, ಆ ಚಿತ್ರವನ್ನು ಅಂತರ್ಜಾಲದಲ್ಲಿ ಹರಿಯಬಿಡುವುದು. ಕಾಂಡೋಮ್‌ನಿಂದ ಯಾವ ಕೆಲಸವಾಗಬೇಕಿತ್ತೋ ಅದನ್ನೊಂದು ಬಿಟ್ಟು ಉಳಿದೆಲ್ಲ ಕೀಟಲೆಗಳು ನಡೆಯುತ್ತಿವೆ.